ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ:

ವಿಷಯ: ಬಿಲ್ಲಿನ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಭದ್ರತಾ ಠೇವಣಿಯನ್ನು ಬಿಲ್ಲಿನಲ್ಲಿ ಕಟಾವಣೆ ಮಾಡುವ ಬಗ್ಗೆ.

ಉಲ್ಲೇಖ: 1. ಮುಆ/ಪಿಆರ್/216/2024–25, ದಿನಾಂಕ: 13–11–2024.
2. ಈ ಕಛೇರಿಯಿಂದ ಗುತ್ತಿಗೆದಾರರಿಗೆ ನೀಡಿರುವ ಪತ್ರ ದಿನಾಂಕ: 01–07–2025.
3. ಗುತ್ತಿಗೆದಾರರ ಮನವಿ ರವರ ಪತ್ರ ದಿನಾಂಕ: 02–07–2025.

* * * * *

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ಉಲ್ಲೇಖ (1) ರ ಆದೇಶದಂತೆ ಗುತ್ತಿಗೆದಾರರಾದ ಮೆ॥ ಶ್ರೀ ಚೌಡೇಶ್ವರಿ ಕನ್ಸ್ಟ್ರಕ್ಷನ್ಸ್, ಪ್ರೊ: ಶರತ್ ಜೆ ಎನ್ ರವರಿಗೆ ಈ ಕೆಳಕಂಡ ವಿವರದಂತೆ 1ನೇ ಮತ್ತು ಅಂತಿಮ ಬಿಲ್ಲಿನ ಮೊತ್ತವನ್ನು ಪಾವತಿಸುವ ಸಂಬಂಧ ಕಾರ್ಯಾದೇಶ ಮೊತ್ತಕ್ಕೆ ಶೇ. 10% ರಷ್ಟು ಹೆಚ್ಚುವರಿ ಭದ್ರತಾ ಠೇವಣಿಯನ್ನು **1 ವರ್ಷ ಅವಧಿಗೆ ಚಾಲ್ತಿ ಇರುವಂತೆ FDR/ Pay Order/ Bank Guarantee in favour of The Executive Engineer, Byatarayanapura Division, BBMP, Bengaluru, valid for** ಮುಖಾಂತರ ಈ ಕಛೇರಿಗೆ ಸಲ್ಲಿಸಲು ಉಲ್ಲೇಖ (2) ರ ಈ ಕಛೇರಿ ಪತ್ರದ ಮುಖೇತ ಸೂಚಿಸಲಾಗಿರುತ್ತದೆ.

ಕ್ರ. ಸಂ	ಜಾಬ್ ಸಂಖ್ಯೆ	ಕಾಮಗಾರಿ ಹೆಸರು ಮತ್ತು ಜಾಬ್ ಸಂಖ್ಯೆ	ಕಾರ್ಯಾದೇಶ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ)	ಬಿಲ್ಲಿನ ಮೊತ್ತ ರೂ. (ಜಿ.ಎಸ್.ಟಿ. ಹೊರತುಪಡಿಸಿ)	ಸಲ್ಲಿಸಬೇಕಾದ ಶೇ. 10% ರಷ್ಟು ಭದ್ರತಾ ಠೇವಣಿ ಮೊತ್ತ
1	013–23–000010	Improvements to Roads and Drains at Hanuman Layout, Yelagamma Layout Anjaneya Temple and Surrounding areas in Ward No. 13, (Doddabommasandra)	19,84,106.45	1st & Final bill amount **Rs. 19,84,107.00**	**1,98,411.00**

ಮುಂದುವರೆದಂತೆ, ಮೆ॥ ಶ್ರೀ ಚೌಡೇಶ್ವರಿ ಕನ್ಸ್ಟ್ರಕ್ಷನ್ಸ್, ಪ್ರೊ: ಶರತ್ ಜೆ ಎನ್ ರವರು ದಿನಾಂಕ: 02–07–2025 ರಂದು ಉಲ್ಲೇಖ (3) ರಂತೆ ಈ ಕಛೇರಿ ಪತ್ರಕ್ಕೆ ಈ ಕೆಳಕಂಡಂತೆ ಮನವಿ ಸಲ್ಲಿಸಿರುತ್ತಾರೆ.

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವ 1ನೇ ಮತ್ತು ಅಂತಿಮ ಬಿಲ್ಲಿನ ಮೊತ್ತದ ಪಾವತಿಗಾಗಿ ಉಲ್ಲೇಖ (1) ರ ಆದೇಶದಂತೆ ಕಾರ್ಯಾದೇಶ ಮೊತ್ತಕ್ಕೆ ಶೇ. 10% ರಷ್ಟು ಭದ್ರತಾ ಠೇವಣಿಯನ್ನು ಪಾವತಿಸಬೇಕಾಗಿರುತ್ತದೆ.

ಆದರೆ, 1ನೇ ಮತ್ತು ಅಂತಿಮ ಬಿಲ್ಲಿನಲ್ಲಿ ಪಾವತಿಗೆ ಬಾಕಿ ಇರುವ ಮೊತ್ತದಲ್ಲೇ ಶೇ. 10% ರಷ್ಟು ಹೆಚ್ಚುವರಿ ಭದ್ರತಾ ಠೇವಣಿ ಮೊತ್ತವನ್ನು ಕಟಾಯಿಸಿ, ಉಳಿಕೆ ಮೊತ್ತವನ್ನು ನಿವ್ವಳ ಮೊತ್ತವನ್ನು ಪಾವತಿಸುವಂತೆ ಗುತ್ತಿಗೆದಾರರು ಕೋರಿರುತ್ತಾರೆ.

Bill amount (Excluding GST) : 1st & Final bill amount **Rs. 19,84,107.00**			
Gross Bill amount to be paid to the Firm/Contractor (Including GST)	**Statutory Deduction Amount (With FSD amount)**	**Total 10% Addl. Security Deposit Amount**	**Remaining net amount to be paid to the Firm/Contractor**
23,41,246.00	2,13,255.00	1,98,411.00	20,46,643.00

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಬಾಕಿ ಇರುವ ಟಾಸ್ಕ್‌ನ್ನು ಮುಖ್ಯ ಅಭಿಯಂತರರಿಗೆ ಸಲ್ಲಿಸಲು ತಮ್ಮ ಮುಂದಿನ ಆದೇಶ ಹಾಗೂ ಅನುಮೋದನೆ ಕೋರಿ ಸಂಬಂಧಿಸಿದ ದಾಖಲೆಗಳೊಂದಿಗೆ ಕಡತವನ್ನು ಸಲ್ಲಿಸಿದೆ.

ಮುಂದುವರೆದಂತೆ, ಶೇ. 10% ರಷ್ಟು ಭದ್ರತಾ ಠೇವಣಿ ಮೊತ್ತ **ರೂ. 1,98,411.00** ಕಾಲಾವಧಿ ಮುಗಿದ ನಂತರ ಬಿಡುಗಡೆಗೆ ಸೂಕ್ತ ಆದೇಶ ಜಾರಿಯಾದ ಸಂದರ್ಭದಲ್ಲಿ ಕೇಂದ್ರ ಕಛೇರಿಯ ಲೆಕ್ಕ ಶಾಖೆಯಲ್ಲಿಯೇ ಪಾವತಿಸಬೇಕಾಗಿರುತ್ತದೆ. ಅಥವಾ ವಿಭಾಗ ಕಛೇರಿಯ ಖಾತೆಗೆ ನಿಧಿ ವರ್ಗಾವಣೆಯಾದ ನಂತರ ಶ್ರೀ. ಬಿ ಗಿರೀಶ್ ರವರ ಖಾತೆಗೆ ಪಾವತಿಸಬೇಕಾಗಿರುತ್ತದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಸಹಾಯಕ ಲೆಕ್ಕಾಧಿಕಾರಿಗಳು
ಬ್ಯಾಟರಾಯನಪುರ ವಿಭಾಗ ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು-560092.

ರವರಿಗೆ,

ದಿನಾಂಕ: 02–07–2025.

ಕಾರ್ಯಪಾಲಕ ಅಭಿಯಂತರರು,
ಬ್ಯಾಟರಾಯನಪುರ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು–560092.

ಯಿಂದ,
ಮೆ॥ ಶ್ರೀ ಚೌಡೇಶ್ವರಿ ಕನ್ಸ್ಟ್ರಕ್ಷನ್ಸ್, ಪ್ರೊ: ಶರತ್ ಜೆ ಎನ್,
ನಂ. 405, 3ನೇ ಅಡ್ಡರಸ್ತೆ, ನ್ಯೂ ಬಿಇಎಲ್ ರಸ್ತೆ,
ದೇವಸಂದ್ರ, ಚಿಕ್ಕಮಾರನಹಳ್ಳಿ, ಬೆಂಗಳೂರು–54.

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ ಬೆಂಗಳೂರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು-560092.

ಮಾನ್ಯರೇ,

ವಿಷಯ: ಕಾಮಗಾರಿ ಬಿಲ್ಲಿನ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಭದ್ರತಾ ಠೇವಣಿಯನ್ನು ಬಿಲ್ಲಿನ ಮೊತ್ತದಲ್ಲಿಯೇ ಕಟಾಯಿಸಿ, ಬಾಕಿ ಮೊತ್ತವನ್ನು ಪಾವತಿಸಲು ಕೋರಿ ಮನವಿ.

ಉಲ್ಲೇಖ: ತಮ್ಮ ಕಛೇರಿ ಪತ್ರ ದಿನಾಂಕ: 01–07–2025.

* * * * *

ಈ ಕೆಳಗೆ ಸಹಿ ಮಾಡಿರುವ ಮೆ॥ ಶ್ರೀ ಚೌಡೇಶ್ವರಿ ಕನ್ಸ್ಟ್ರಕ್ಷನ್ಸ್, ಪ್ರೊ: ಶರತ್ ಜೆ ಎನ್, ಗುತ್ತಿಗೆದಾರನಾದ ನಾನು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾನು ಬ್ಯಾಟರಾಯನಪುರ ವಿಭಾಗದ ವಾರ್ಡ್ ಸಂಖ್ಯೆ: 13 ದೊಡ್ಡಬೊಮ್ಮಸಂದ್ರ ವಾರ್ಡಿನಲ್ಲಿ ಕಾಮಗಾರಿಯನ್ನು ಟೆಂಡರ್ ಮುಖಾಂತರ ಪಡೆದು ಪೂರ್ಣಗೊಳಿಸಿ, ಬಿಲ್ಲನ್ನು ಪಾವತಿಗಾಗಿ ಸಮುಚಿತ ಮಾರ್ಗದಲ್ಲಿ ಸಲ್ಲಿಸಿರುತ್ತೇನೆ.

ಪ್ರಸ್ತುತ ಸದರಿ ಬಿಲ್ಲು ಪಾವತಿಗೆ ಅರ್ಹವಿದ್ದು, ಹೆಚ್ಚುವರಿ ಭದ್ರತಾ ಠೇವಣಿ ರೂ. 1,98,411.00 ಗಳಲ್ಲಿ ಈಗಾಗಲೇ ಬಿಲ್ಲಿನಲ್ಲಿ ಕಟಾವಣೆ ಮಾಡಿರುವ ರೂ. 1,17,063.00 ಗಳ ಭದ್ರತಾ ಠೇವಣಿ ಮೊತ್ತವನ್ನು ಬಿಟ್ಟು ಉಳಿದ ಮೊತ್ತ ರೂ. 81,348.00 ಗಳನ್ನು ಪಾವತಿಸುವಂತೆ ಉಲ್ಲೇಖದ ಪತ್ರದಲ್ಲಿ ಸೂಚಿಸಿರುತ್ತೀರಿ.

ಆದರೆ ನನಗೆ ಆರ್ಥಿಕ ತೊಂದರೆ ಇರುವುದರಿಂದ, ನೀವು ಸೂಚಿಸಿರುವ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ರೂ. 81,348.00 ಗಳನ್ನು ಪಾವತಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಸದರಿ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತವನ್ನು ನನಗೆ ಪಾವತಿ ಮಾಡಬೇಕಾದ ಬಿಲ್ಲಿನ ಮೊತ್ತದಲ್ಲಿಯೇ ಕಟಾವಣೆ ಮಾಡಿ ಉಳಿಕೆ ಮೊತ್ತವನ್ನು ನನ್ನ ಖಾತೆಗೆ ಪಾವತಿಸ ಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಕಾಮಗಾರಿ ವಿವರ:

ಕ್ರ. ಸಂ	ಜಾಬ್ ಸಂಖ್ಯೆ	ಕಾಮಗಾರಿ ಹೆಸರು ಮತ್ತು ಜಾಬ್ ಸಂಖ್ಯೆ	ಕಾರ್ಯಾದೇಶ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ)	ಬಿಲ್ಲಿನ ಮೊತ್ತ ರೂ. (ಜಿ.ಎಸ್.ಟಿ. ಹೊರತುಪಡಿಸಿ)
1	013-23-000010	Improvements to Roads and Drains at Hanuman Layout, Yelagamma Layout Anjaneya Temple and Surrounding areas in Ward No. 13, (Doddabommasandra)	**19,84,106.45**	**Rs. 19,84,107.00** CBR No: 24-000926 Dt: 19-Jun-2023

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ, ನಂ. 2152/20, ಡಿಫೆನ್ಸ್ ಕಾಲೋನಿ,
ಬಿ.ಡಬ್ಲ್ಯು.ಎಸ್.ಎಸ್.ಬಿ.ಟ್ಯಾಂಕ್ ರಸ್ತೆ, ಸಹಕಾರನಗರ, ಬೆಂಗಳೂರು-560092.

ಸಂ: ಬೃಬೆಂಮಪಾ/ಕಾ.ಪಾ.ಅ/ಬ್ಯಾ.ಪು/ಪಿಆರ್/ /2025-26 ದಿನಾಂಕ: 01-07-2025

ರವರಿಗೆ,
ಮೆ॥ ಶ್ರೀ ಚೌಡೇಶ್ವರಿ ಕನ್ಸ್ಟ್ರಕ್ಷನ್ಸ್,
ಪ್ರೊ: ಶರತ್ ಜೆ ಎನ್,
ನಂ. 405, 3ನೇ ಅಡ್ಡರಸ್ತೆ, ನ್ಯೂ ಬಿಇಎಲ್ ರಸ್ತೆ,
ದೇವಸಂದ್ರ, ಚಿಕ್ಕಮಾರನಹಳ್ಳಿ, ಬೆಂಗಳೂರು-54..

ಮಾನ್ಯರೇ,

ವಿಷಯ: ಕಾಮಗಾರಿ ಬಿಲ್ಲಿನ ಮೊತ್ತವನ್ನು ಪಾವತಿಸಲು ಹೆಚ್ಚುವರಿ ಭದ್ರತಾ ಠೇವಣಿಯನ್ನು ಪಾವತಿಸುವ ಬಗ್ಗೆ.

ಉಲ್ಲೇಖ: 1. ಮುಆ/ಪಿಆರ್/216/2024-25, ದಿನಾಂಕ: 13-11-2024.
2. ಮುಆ/ಪಿಆರ್/216/2024-25, ದಿನಾಂಕ: 21-12-2024.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಂತೆ ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ ತಾವು ನಿರ್ವಹಿಸಿರುವ ಈ ಕೆಳಕಂಡ ಕಾಮಗಾರಿಯ ಬಿಲ್ಲಿನ ಮೊತ್ತವನ್ನು ಪಾವತಿಸುವ ಸಂಬಂಧ ಹೆಚ್ಚುವರಿ ಭದ್ರತಾ ಠೇವಣಿಯನ್ನು 1 ವರ್ಷ ಅವಧಿಗೆ ಚಾಲ್ತಿ ಇರುವಂತೆ **FDR/ Pay Order/ Bank Guarantee in favour of The Executive Engineer, Byatarayanapura Division, BBMP, Bengaluru, valid for** ಮುಖಾಂತರ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಕ್ರ. ಸಂ	ಜಾಬ್ ಸಂಖ್ಯೆ	ಕಾಮಗಾರಿ ಹೆಸರು ಮತ್ತು ಜಾಬ್ ಸಂಖ್ಯೆ	ಕಾರ್ಯಾದೇಶ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ)	ಬಿಲ್ಲಿನ ಮೊತ್ತ ರೂ. (ಜಿ.ಎಸ್.ಟಿ. ಹೊರತುಪಡಿಸಿ)	ಸಲ್ಲಿಸಬೇಕಾದ ಶೇ. 10% ರಷ್ಟು ಭದ್ರತಾ ಠೇವಣಿ ಮೊತ್ತ
1	013-23-000010	Improvements to Roads and Drains at Hanuman Layout, Yelagamma Layout Anjaneya Temple and Surrounding areas in Ward No. 13, (Doddabommasandra)	**19,84,106.45**	**Rs. 19,84,107.00** CBR No: 24-000926 Dt: 19-Jun-2023	**1,98,411.00**
ಈಗಾಗಲೇ ಬಿಲ್ಲಿನ ಮೊತ್ತದಲ್ಲಿ ರೂ. 1,17,063.00 ಗಳ ಭದ್ರತಾ ಠೇವಣಿ ಮೊತ್ತವನ್ನು ಕಟಾವಣೆ ಮಾಡಲಾಗಿರುತ್ತದೆ. ಉಳಿದ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ರೂ. 81,348.00 ಗಳನ್ನು ಪಾವತಿಸಬೇಕಾಗಿರುತ್ತದೆ.					

ಕಾಮಗಾರಿಯ ಮೊತ್ತವನ್ನು ಪಾವತಿಸುವ ಸಂಬಂಧ ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ರೂ. **81,348.00** ಗಳನ್ನು **FDR/ Pay Order/ Bank Guarantee** ಮುಖಾಂತರ ಈ ಕಛೇರಿಗೆ ಸಲ್ಲಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ